ಇ) ಕ್ಯಾಪಿಟೇರ್ಷ್ ಶುಲ್ಕವನ್ನು ರದ್ದು ಮಾಡಬೇಕೆಂದು ರಾಜ್ಯದ ವಿದ್ಯಾರ್ಥಿಗಳು ಮತ್ತು ಪೋಷಕರು ಒತ್ತಾಯ ಮಾಡುತ್ತಿರುವುದು ಸರಕಾರದವರಿಗೆ ತಿಳಿದಿದೆಯೆ ;

ಈ) ಈ ಕ್ಯಾಪಿಟೇರ್ಷ್ ಶುಲ್ಕವನ್ನು ರದ್ದು ಮಾಡಲು ಸರ್ಕಾರದವರು ನಿರ್ಧರಿಸಿದ್ದಾರೆಯೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಜ್ಯ ಮಂತ್ರಿಗಳು) :—

ಅ) ∄

ಆ) ಬಂದಿದೆ.

ಇ) ತಿಳಿದಿದೆ.

ಈ) ಕ್ಯಾಪಿಟೇರ್ಷ್ ಶುಲ್ಕವನ್ನು ಹಂತ ಹಂತವಾಗಿ ಎಂದರೆ ಮುಂದಿನ ಐದು ವರ್ಷಗಳಲ್ಲಿ ರದ್ದು ಮಾಡಲು ಸರ್ಕಾರ ತೀರ್ಮಾನಿಸಿ ಆ ಬಗ್ಗೆ ಆದೇಶವನ್ನು ಹೊರಡಿಸಿದೆ.

39. ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ್).—ಮಾನ್ಯ ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಶಿವಮೊಗ್ಗ ಜಿಲ್ಲೆಯ ಹಂದಿಗೋಡು ಮತ್ತು ಇನ್ನಿತರ ಹಳ್ಳಿಗಳಲ್ಲಿ ವಿಶೇಷವಾಗಿ ಜನರಿಗೆ ಅಂಗವಿಕಲತೆ ರೋಗ ಹಬ್ಬುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಎಷ್ಟು ಹಳ್ಳಿಗಳಲ್ಲಿ ಎಷ್ಟು ಕುಟುಂಬಗಳಲ್ಲಿ ಮತ್ತು ವ್ಯಕ್ತಿಗಳಿಗೆ ಈ ರೋಗ ತಗುಲಿದೆ, ಎಷ್ಟು ವರ್ಷಗಳಿಂದ ಇದೆ? ಪ್ರತಿ ವರ್ಷ ರೋಗ ತಗುಲಿದವರ ಸಂಖ್ಯೆ ಎಷ್ಟು ;

ಇ) ಈ ರೋಗಗಳಿಗೆ ಸರ್ಕಾರದವರು ಔಷಧೋಪಚಾರ ಮತ್ತು ತಪಾಸಣೆಗೆ ಏನು ವ್ಯವಸ್ಥೆ ಮಾಡಿದ್ದಾರೆ ;

ಈ) ಈ ರೋಗದ ಬಗ್ಗೆ ತಜ್ಞರ ಅಭಿಪ್ರಾಯವೇನು ;

ಉ) ಖಾಯಂ ಆಗಿ ಅಂಗವಿಕಲರಾಗುವ ಈ ಕುಟುಂಬಗಳ ಪೋಷಣೆಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಮಂತ್ರಿಗಳು):—

ಅ) ಬಂದಿದೆ.

ಆ) 25 ಹಳ್ಳಿಗಳಲ್ಲಿ ಈ ರೋಗ ಕಾಣಿಸಿಕೊಂಡಿದೆ. 75 ಕುಟುಂಬಗಳಲ್ಲಿ 154 ವ್ಯಕ್ತಿಗಳಿಗೆ ಈ ಖಾಯಿಲೆ ತಗುಲಿದೆ. 1975 ರಿಂದ ಈ ಖಾಯಿಲೆ ಕಾಣಿಸಿಕೊಂಡಿದೆ.

ಇ) ಆಗಿಂದಾಗ್ಗೆ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಈ ಗ್ರಾಮಗಳಿಗೆ ಭೇಟಿ ಕೊಟ್ಟು ಖಾಯಿಲೆಯಿಂದ ನರಳುತ್ತಿರುವವರಿಗೆ ಸೂಕ್ತ ಚಿಕಿತ್ಸೆ ಮತ್ತು ಸಲಹೆಗಳನ್ನು ಕೊಡುತ್ತಿದ್ದಾರೆ.

ಈ) ತಜ್ಞರ ಅಭಿಪ್ರಾಯವನ್ನು ಲಗತ್ತಿಸಲಾಗಿದೆ.

ಉ) ಈ ವಿಷಯವನ್ನು ಪರಿಶೀಲಿಸಲಾಗುವುದು.

ತಂದೆದವರ ಶಿಫಾರಸು ಈ ಕೆಳಿಗೆ ಕಂಡಂತೆ ಇರುತ್ತದೆ.

1) ಈ ಖಾಯಿಲೆ ಕೀಲು ಮತ್ತು ಎಲುಬುಗಳನ್ನು ಆವರಿಸಿದ ಕೂಡಲೇ ಸೂಕ್ತ ಔಷಧೋಪಚಾರ ಕೊಡಬೇಕು.

2) ತಜ್ಞರಿಂದ (ಅರ್ಥೋಪೆಡಿಕ್ಸ್ ಸರ್ಜನ್) ಔಷಧೋಪಚಾರ ನಡೆಸಬೇಕು.

3) ಈ ಖಾಯಿಲೆಯ ಚಿಹ್ನೆಗಳು ಕಂಡ ಕೂಡಲೆ, ಅವರನ್ನು ಆಸ್ಪತ್ರೆಗೆ ಸೇರಿಸಿ, ಕೀಲು ಅಲುಗದಂತೆ ಚಿಕಿತ್ಸೆ ಕೊಡಿಸಬೇಕು ಮತ್ತು ಸೂಕ್ತ ಔಷಧಗಳನ್ನು ಕೊಡಬೇಕು.

4) ಈ ಖಾಯಿಲೆಯಿಂದ ನರಳುವವರಿಗೆ ಪುನರ್ವಸತಿ ಮತ್ತು ಅದಕ್ಕೆ ತಕ್ಕ ಆಕ್ಯುಪೇಷನಲ್ ತೆರಪಿ ಕೊಡಿಸಬೇಕು.

5) ಕೀಲು ಮತ್ತು ಮೂಳೆ ಈ ಖಾಯಿಲೆಯಿಂದ ವಿಕಾರವಾಗಿದ್ದರೆ ಅದನ್ನು ಶಸ್ತ್ರಚಿಕಿತ್ಸೆಯಿಂದ ಸರಿಪಡಿಸಬೇಕು.

ಈ ಖಾಯಿಲೆ ಬಗ್ಗೆ ರಾಷ್ಟ್ರೀಯ ಪೌಷ್ಟಿಕ ಆಹಾರ ಸಂಸ್ಥೆ, ಹೈದರಾಬಾದ್ ಕೂಡ ತನಿಖೆ ಮಾಡಿರುತ್ತಾರೆ. ಅವರು ಕೂಡ ಯಾವ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನೇ ಆಗಲಿ ಸಲಹೆ ಮಾಡಿಲ್ಲ. ಆದರೂ ಕೂಡ, ಈ ಖಾಯಿಲೆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದು ಸಂಶೋಧನೆಯನ್ನು ಮಾಡಲು ಸಲಹೆ ಮಾಡಿರುತ್ತಾರೆ. ಈಗ ಉಳಿದಿರುವ ಒಂದೇ ಮಾರ್ಗವೆಂದರೆ, ಈ ಒಂದು ಸಮಸ್ಯೆಯನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಕೇಂದ್ರ ಸಂಸ್ಥೆಗೆ, ಒಪ್ಪಿಸಿ ಅದರಿಂದ ಹೆಚ್ಚಿನ ಸಂಶೋಧನೆಯನ್ನು ಮಾಡಿಸಿ, ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

39. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:—

ಅ) ಕಳೆದ ಮೂರು ವರ್ಷಗಳಲ್ಲಿ ರೈತರ ಮತ್ತು ಕಾರ್ಮಿಕರ ಹೋರಾಟಗಳ ಅಥವಾ ಚಳುವಳಿಗಳ ಸಂದರ್ಭದಲ್ಲಿ ನೂರಾರು ರೈತರ ಮತ್ತು ಕಾರ್ಮಿಕರ ಮೇಲೆ ವಿನಾಕಾರಣ ಪೊಲೀಸಿನವರು ಕೇಸುಗಳನ್ನು